Regd No M 1299 SATYAVADI Founded 1917
The Oldest Newspaper of Mysore

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು

ಸಂಪುಟ 32 ಸಂಚಿಕೆ 15] ಶುಕ್ರವಾರ 24-9-48 [ಬಿಡಿ ಪ್ರತಿ 3 ಪೈ

ಸಂಯುಕ್ತ ಜನಾಂಗ ಸಂಸ್ಥೆಗೆ ದ. ಆಫ್ರಿಕಾ ಬೆದರಿಕೆ ಹಾಕಿಬಿಟ್ಟಿದೆ

ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ಬಗ್ಗೆ ಇರುವ ಭಾವನೆಯನ್ನು ಕುರಿತು ಸಂಯುಕ್ತ ರಾಷ್ಟ್ರ ಸಂಸ್ಥೆಯ ಬಹಿರಂಗ ಅಧಿವೇಶನದಲ್ಲಿ ಚರ್ಚಿಸ ಬೇಕೆಂದು ಭಾರತ ಮಾಡಿರುವ ಶಿಫಾರಸನ್ನು ಅಂಗೀಕರಿಸಿದರೆ, ದಕ್ಷಿಣ ಆಫ್ರಿಕ ಪ್ರತಿನಿಧಿ ಮಂಡಲ ಇತರ ವಿಷಯಗಳ ಚರ್ಚೆಯಲ್ಲಿ ಭಾಗವಹಿಸುವ ಬಗ್ಗೆ ಪರಿಸ್ಥಿತಿಯನ್ನು ಪರಿಶೀಲಿಸ ಬೇಕಾಗುವುದು ಎಂದು ಪ್ರತಿನಿಧಿ ಮಂಡಲದ ನಾಯಕ ಮಿ || ಎಲಿಕ್ ಲೋ ತಿಳಿಸಿರುವುದಾಗಿ ಪೇರಿಸ್ ವರದಿ

ರೆಡ್ಡಿಯವರ ಪತ್ರಿಕಾ ಪರಿಷತ್ತು

ಸಾಧ್ಯವಾದರೆ ಈ ತಿಂಗಳ ಕೊನೆಯಲ್ಲಿಯೇ ಕಡಿಮೆ ಮಾಡಿರುವ ಅಕ್ಕಿಯನ್ನು ಹೆಚ್ಚಿಸಿ ಕೊಟ್ಟೀವು ಜನವರಿಯಿಂದ ಆಹಾರ ಹತೋಟಿ ಕ್ರಮವನ್ನು ಮುಂಚಿನಂತೆ ಜಾರಿ ಮಾಡುತ್ತೇವೆ ಅನ್ನ ಬಟ್ಟೆಯ ವಿಷಯದಲ್ಲಿ ಭಾರತ ಸರ್ಕಾರ ಯೋಜನೆಗಳೊಂದಿಗೆ ನಾವು ಹೊಂದಿಕೊಳ್ಳಬೇಕು. ಪತ್ರಿಕೆಗಳು ಸತ್ಯಾಂಶದ ಕಡೆ ಗಮನವಿಟ್ಟು ಕೆಲಸ ಮಾಡಬೇಕು ಎಂದು ಶ್ರೀ ಕೆ. ಸಿ. ರೆಡ್ಡಿ ಬೆಂಗಳೂರು ಅಠಾರ ಕಚೇರಿಯಲ್ಲಿ ನಿನ್ನೆ ಏರ್ಪಡಿಸಿದ್ದ ಪತ್ರಿಕಾ ವರಿಷತ್ತಿನಲ್ಲಿ ತಿಳಿಸಿದರು.

ನಿಜಾಮರ ರೇಡಿಯೋ ಭಾಷಣ

ಹೈದರಾಬಾದಿನ ಬಗ್ಗೆ ಸ್ವಾರ್ಥಸಾಧಕರು ಅಪಪ್ರಚಾರಕ್ಕೆ ಬಲಿಯಾಗಬೇಡಿರೆಂದು ಮುಸ್ಲಿಂ ಜನತೆಗಂಗಕ್ಕೆ ನಮ್ಮ ವಿನಂತಿ. ಹಿಂದೂ ಬಹು ಸಂಖ್ಯಾತ ಹೈದರಾಬಾದಿನಲ್ಲಿ ಮುಸ್ಲಿಂ ರಾಜ್ಯ ಹೇಗೆ ಸಾಧ್ಯ? ಕಾಸಿಂ ರಜ್ವಿ, ಲಾಯಕ್ ಅಲಿ ಮಾತು ಕೇಳಿ ನಾವು ಕೆಟ್ಟವು ಎಂದು ನಿಜಾಮರು ರೇಡಿಯೋ ಭಾಷಣದಲ್ಲಿ ತಿಳಿಸಿದರು.

ಶಂಕುಸ್ಥಾಪನೆ

ವಿಜಯದಶಮಿ ದಿನ ಭಾರತ ಸರ್ಕಾರದ ಕಮ್ಯೂನಿಕೇಷನ್ ಮಂತ್ರಿ ಶ್ರೀ ರಫಿ ಅಹ್ಮದ್ ಕಿದ್ವಾಯಿ ಬೆಂಗಳೂರಿನಲ್ಲಿ ಟೆಲಿವೋ ಕಾರ್ಖಾನೆ ಶಂಕುಸ್ಥಾಪನೆ ನೆರವೇರಿಸುವರು

ಶ್ರೀ ಕೆ. ಸಿ. ರೆಡ್ಡಿ

ಪ್ರಧಾನಿ ಶ್ರೀ ಕೆ. ಸಿ. ರೆಡ್ಡಿ ಶ್ರೀಮನ್ಮಹಾರಾಜರ ಮಂಡ್ಯ ಪ್ರವಾಸದಲ್ಲಿ ಭಾಗವಹಿಸುವರು.

ಪೆಟ್ರೋಲು ಸುರಿದು ಸುಟ್ಟರು

ಜಬ್ಬಲ್ಪುರದಲ್ಲಿ ಹಿಂದೂ ನಿರಾಶ್ರಿತ ಸೊಬ್ಬನನ್ನು ಪೆಟ್ರೋಲ್ ಸುರಿದು ಸುಟ್ಟರು. ಆತನು ಆಸ್ಪತ್ರೆಯಲ್ಲಿ ಸತ್ತನು

ಪತ್ರಿಕಾ ಗೋಷ್ಠಿ

ಮೈಸೂರು ಆಕಾಶವಾಣಿ ಡೈರೆಕ್ಟರವರು ಇದೇ ತಾ || 28 ರ ಬೆಳಿಗ್ಗೆ 9-30 ಗಂಟೆಗೆ ಪತ್ರಿಕಾ ಗೋಷ್ಠಿ ಏರ್ಪಡಿಸಿರುವರು.

ರಾಜಾಜಿಯೊಡನೆ ಭೇಟಿ

ಹೈದರಾಬಾದು ಕಾಂಗ್ರೆಸಿನ ಅಧ್ಯಕ್ಷ ಶ್ರೀ ರಮಾನಂದ ತೀರ್ಥರು ನವದೆಹಲಿಯಲ್ಲಿ ಸೆಹರು ಪಟೇಲ್ ಮತ್ತು ಬಲದೇವ ಸಿಂಗ್ ಸಂಗಡ ಹೈದರಾಬಾದಿನ ಪರಿಸ್ಥಿತಿ ಬಗ್ಗೆ ಮಾತುಕತೆ ನಡೆಸಿದರು ನಾಳೆ ಅವರು ರಾಜಾಜಿಯನ್ನು ಕಾಣುವರೆಂದು ನಿರೀಕ್ಷಣೆ

ರಜಕಾರರಿಂದ ಲೂಟಿ

ಸಾಧಾರಣ ವಸ್ತ್ರಧಾರಿಗಳಾದ ರಜಕಾರರು ಜಾಹೀರಾಬಾದಿನ ಒಳಿ ಮೊನ್ನೆ ಲೂಟಿ ಮಾಡುವುದರೊಳಗೆ ಭಾರತ ಸೇನೆಬಂದಿತು 30 ಸಾವುನೋವಾಗಿವೆ

ಹೈದರಾಬಾದಿನಲ್ಲಿ ನಾಡಿದ್ದು ವಂದನಾರ್ಪಣೆ ದಿನ ರಾಜಾಜಿ ಬೇಡವೆ ದಿ ಎವರು

ಅವನಿಗೆ ಪುನಃ ನೌಕರಿ

ಗುಡ್ಡಗಾಡಿನ ಜನರು ಪಂ | ನೆಹರು ಭೇಟಿ ಇತ್ತ ಕಾಲದಲ್ಲಿ ವಿರೋಧ ಪ್ರದರ್ಶನ ಮಾಡುವಂತೆ ಚಿತಾವಣೆ ಮಾಡಿದ್ದನೆಂಬ ಆಪಾದನೆ ಮೇಲೆ ಗಡಿನಾಡು ಖಾರ್ ಸಾಹೇಬ್ ಸರ್ಕಾರ ಕೆಲಸದಿಂದ ವಜಾ ಮಾಡಿದ್ದ ಗಡಿನಾಡಿನ ಪೊಲಟಿಕಲ್ ಏಜೆಂಟ್ ನವಾಬ್ ಮೊಹಬೂಬ್ ಅಲಿ ಖಾರ್ಕರನ್ನು ಪಾಕೀಸ್ತಾನ ಸರ್ಕಾರ ಗುಡ್ಡುಗಾಡಿನ ಜನರ ಮೇಲ್ವಿಚಾರಕರನ್ನಾಗಿ ನೇಮಕ ಮಾಡಿದೆ.

ಸಹಾಯ ಧನ

ಬೆಂಗಳೂರು ಕ. ಸಾ. ಪರಿಷತ್ತಿನ ವಾರ್ಷಿಕ ಸಹಾಯ ದ್ರವ್ಯ 4500 ರೂ. ನಿಂದ 8000 ರೂ. ಗೆ ಹೆಚ್ಚಿಸುವ ಅಂಶ ಪ್ರಭುತ್ವ ಪರಿಶೀಲನೆಯಲ್ಲಿದೆ

ಕೆಂಪುಕೋಟೆಗೆ ತರುದಿಲ್ಲ

ರಜಕಾರರ ನಾಯಕ ಸಯ್ಯದ್ ಕಾಸಿಂ ರಜವಿಯನ್ನು ದೆಹಲಿ ಕೆಂಪುಕೋಟೆಯಲ್ಲಿಡುವುದಿಲ್ಲವೆಂದು ಗೊತ್ತಾಗಿದೆ. ಎಲ್ಲಿಡಲಾಗುವುದೆಂಬುದಿನ್ನೂ ಗೊತ್ತಿಲ್ಲ.

ಸಿಕಂದರಾಬಾದ್ನಲ್ಲಿ ಸೇನೆ

10 ಸಾವಿರ ಮಂದಿ ಭಾರತ ಸೇನಿಕ ಈಗ ಸಿಕಂದರಾಬಾದಿನಲ್ಲಿರುವುದಾಗಿ ಗವರ್ನರ್ ಚೌಧುರಿ ತಿಳಿಸಿದ್ದಾರೆ.

ರಾಜಬಂದಿಗಳ ಖುಲಾಸೆ

ಹೈದರಾಬಾದಿನಲ್ಲಿ ಮಿಲಿಟರಿ ಆಡಳಿತಗಾರರು ಇದುವರಿಗೆ ಎಂಟು ಸಾವಿರ ಮಂದಿ ರಾಜಬಂದಿಗಳನ್ನು ಬಿಟ್ಟರು.

ಸೇತುವೆ ಆರಂಭೋತ್ಸವ

ಇದೇ ತಾರೀಖು 29 ರಲ್ಲಿ ನೂತನವಾಗಿ ನಿರ್ಮಾಣ ಮಾಡಿರುವ ಲೋಕಪಾವನಿ ಸೇತುವೆ ಆರಂಭೋತ್ಸವವನ್ನು ಮಹಾಪ್ರಭುಗಳು ನೆರವೇರಿಸುವರು.

ಗಾಂಧಿ ಆಶ್ರಮ ವಶ

ಪೆಷಾವರ್ ಪೋಲೀಸಿನವರು ಪಾಕಿಸ್ತಾನ ಪ್ರಭುತ್ವ ಆಜ್ಞೆಯಂತೆ ಗಡಿನಾಡು ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನ್‌ರವರ ಆಶ್ರಮದ ಮುಖ್ಯ ಗೃಹ ಮತ್ತು ಅದರ ಅಕ್ಕಪಕ್ಕಗಳ ಕಟ್ಟಡಗಳನ್ನು ವಶಮಾಡಿಕೊಂಡರೆಂದು ವರದಿ.

Woodlands

24—9—48 ರಿಂದ

— ಬೆಳಗಿನ ಪ್ರದರ್ಶನ —

ಬ್ರಿಜ್‌ರಾಣಿ – ಬಾಬೂರಾವ್ ಪೈಲ್ವಾನ್

ಪಾತ್ರವಹಿಸಿರುವ

ಗ್ಯಾಲಪಿಂಗ್ ಘೋಸ್ಟ್

(ಹಿಂದಿ)

ಕರಡಿಯೊಡನೆ ಕದನ

ಚಿತ್ರದುರ್ಗ-ತಾಲ್ಲೂಕ್ ಪಲ್ಲೇಗೆರೆ ಗ್ರಾಮವಾಸಿ ಚಿಕ್ಕಣ್ಣನೆಂಬಾತನು ಹೊಲದಲ್ಲಿ ಬರುತ್ತಿರುವಾಗ ಒಂದು ಕರಡಿಯು ಆತನ ಮೇಲೆ ಬಿದ್ದು ವಿಪರೀತ ಗಾಯಪಡಿಸಿದೆ ಅದರೊಡನೆ ಹೋರಾಡಿ ತಪ್ಪಿಸಿಕೊಂಡು ಬಂದ ಆತನನ್ನು ಆಸ್ಪತ್ರೆಗೆ ಸೇರಿಸಲಾಗಿದೆ

ಮೊಕದ್ದಮೆ ಮಾಡಿದೆ

ಚಿತ್ರದುರ್ಗ ಪೌರಸಭೆ ಲಾರಿ ಡ್ರೈವರ್ ಶ್ರೀ ಜೀವರತ್ನಂ ಎಂಬವರ ಮೇಲೆ ಮುನ್ಸಿಪಲ್ ಪಾರ್ಕಿನಲ್ಲಿ ರೈಲ್ವೇ ದಫೇದಾರಂತಾದ ಶ್ರೀ ಎ. ಎಂ. ಶೇಷಾಚಲಂ ಎಂಬುವರು ಕೈಮಾಡಿದರೆಂದೂ, ಡ್ರೈವರ್ ರಕ್ಷಣಾ ಕಾರಿ ಮಾರ್ಚಿತರಾದರೆಂದೂ ಹೇಳಲಾಗಿದೆ. ಉಪಾಧ್ಯಕ್ಷ ಶ್ರೀ ವಾಸುದೇವರಾಯರ ಮೂಲಕ ಈ ಬಗ್ಗೆ ದ್ವಿತೀಯ ನ್ಯಾಯಾಧೀಶರ ಕೋರ್ಟಿನಲ್ಲಿ ಮೊಕದ್ದಮೆ ಹೂಡಲಾಗಿದೆ.

ಸಧ್ಯದಲ್ಲಿಯೆ ಪ್ರದರ್ಶನ

ಹೈದರಾಬಾದ್ ದಂಡಯಾತ್ರೆಯ 200 ಅಡಿಗಳ ಜಲದಚಿತ್ರ ಈ ಮಾಸಾಂತ್ಯದಲ್ಲಿ ಪ್ರದರ್ಶನಕ್ಕೆ ಸಿದ್ಧವಾಗುವುದೆಂದು ನಂಬಲಾಗಿದೆ.

ಕಾಂಗ್ರೆಸ್ ಕಾರ್ಯ ಸಮಿತಿ

ಮೈಸೂರು ಕಾಂಗ್ರೆಸ್ ಅಖಿಲ ಕರ್ನಾಟಕ ಕಾಂಗ್ರೆಸ್‌ನಲ್ಲಿ ವಿಳಿತವಾಗ ಬೇಕೆಂದು ರಾಷ್ಟ್ರ ನಾಯಕರು ಶ್ರೀಗಳಾದ ಟಿ. ಸಿದ್ದಲಿಂಗಯ್ಯ, ಎ ಜಿ ರಾಮಚಂದ್ರರಾವ್‌ರವರುಗಳಿಗೆ ಸೂಚಿಸಿರುವ ದರಿಂದ ಈ ಬಗ್ಗೆ ಚರ್ಚೆ ನಡೆಸಲು ಇದೇ ತಾ | 25 ಮತ್ತು 26 ರಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸೇರುವುದೆಂದು ಬೆಂಗಳೂರು ವರದಿ.

ಕಾಂಗ್ರೆಸ್ ಪಕ್ಷದ ಸಭೆ

ಮೈಸೂರು ರಾಜ್ಯಾಂಗ ಘಟನಾ ಸಮಿತಿ ಕಾಂಗ್ರೆಸ್ ಪಕ್ಷದ ಸಭೆ ಇದೇ ತಾ || 27 ನೇ ಸೋಮವಾರ 9 ಗಂಟೆಗೆ ಬೆಂಗಳೂರು ಕುಮಾರ ಪಾರ್ಕಿನಲ್ಲಿ ಸೇರುವುದು.

ವುಡ್ ಲ್ಯಾಂಡ್ಸ್

24—9—48 ರಿಂದ

ಸ್ವರ್ಣಲತಾ. ನಾಜಿರ್, ಇಸ್ಮೈಲ್

ಪಾತ್ರವಹಿಸಿರುವ

ವಾಮಿಕ್ ಅಜ್ರಿ

(ಅಮೋಘ ಹಿಂದಿ ಚಿತ್ರ)

(ಪ್ರತಿದಿನ 3 ಪ್ರದರ್ಶನಗಳು)

ಅಮೇರಿಕಾದ ಆಸೆ

ಬ್ರಿಟನ್ನಿನಂತೆ ಆಫ್ರಿಕಾದಲ್ಲಿ ಒಂದು ಆರ್ಥಿಕ ಚಕ್ರಾಧಿಪತ್ಯ ಕಟ್ಟುವ ಹಂಬಲವು ಸಂಯುಕ್ತ ಅಮೇರಿಕಾಕ್ಕೂ ಇದೆ. ಈ ಸಂಬಂಧ ಅಮೇರಿಕ ಸರಕಾರ ಮತ್ತು ಇತಿಯೋಪಿಯಾ ಸರಕಾರಗಳೊಳಗೆ ರಹಸ್ಯ ಮಾತುಕತೆಗಳು ನಡೆಯುತ್ತಿವೆಯೆಂದೂ ತಿಳಿಯಲಾಗಿದೆ. ಈ ಚಳವಳಿಯ ಜನಕ ಸಂಯುಕ್ತ ಅಮೇರಿಕಾದ ಮಾಜಿ ಕಾರ್ಯದರ್ಶಿ ಎಡ್ವರ್ಡ್ ಸ್ಟೆಟಿನಿಯವರು

ಧಾರ್ಮಿಕ ಶಿಕ್ಷಣ ರದ್ದು

ಶಾಲೆಗಳಲ್ಲಿ ಧರ್ಮ ಸಂಬಂಧವಾದ ಶಿಕ್ಷಣವನ್ನು ರದ್ದು ಮಾಡಲು ಜಯಪುರ ಸರಕಾರವು ನಿರ್ಧರಿಸಿರುವದು.

ಆರ್ ಎಸ್ ಎಸ್

ನೆಹರು ಸರಕಾರವನ್ನು ತೆಗೆದುಹಾಕುವ ದುರಾಲೋಚನೆ ತನ್ಮಿದಿಲ್ಲವೆಂದೂ, ಗಾಂಧೀಜಿಯವರ ನಿಧನದಲ್ಲಿ ಇತರ ಎಲ್ಲಾ ಮಂದಿಯಂತೆ ತಾವೂ ಸಹಾನುಭೂತಿ ಪಡುತ್ತಿರುವುದಾಗಿಯೂ ಅಪ್ರಯುಕ್ತ ಯೋಗ್ಯ ಏಚಾಂಣೆ ನಡೆಸಿ ತಮಗೆ ಪುನಃ ಕಾರ್ಯಕಲಾಪಗಳನ್ನು ನಡೆಸಲು ಅನುಮತಿ ಕೊಡಬೇಕೆಂದೂ ಅಲಹಾಬಾದಿನ ಕೆಲವು ಮಂದಿ ಆರ್. ಎಸ್. ಎಸ್. ಮುಖಂಡರು ಪ್ರಾಂತೀಯ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ಪಿ. ಡಿ. ಟಾಂಡನ್ನರಲ್ಲಿ ಬಿನ್ನವಿಸಿಕೊಂಡಿರುವರೆಂದು ತಿಳಿಯಬಂದಿದೆ.

ಹಿಂದೀ ಪರೀಕ್ಷೆಗೆ ಕೂತ ಡಿ || ಜಡ್ಜ

ಸೇಲಂನಲ್ಲಿನ 37 ವರ್ಷದ ಡಿ || ಜಡ್ಜರಾದ ಶ್ರೀ ವೆಂಕಟರಮಣ್, ಐ. ಸಿ ಎಸ್. ರವರು ಹಿಂದೀ ಪರೀಕ್ಷೆ ಳುವೇದುವಾರರಾಗಿದ್ದಾರೆ,

ಪರದಾಪದ್ಧತಿ ವಿರೋಧಿಯನ್ನು ಕೊಂದರು

ಕ್ವೆಟ್ಟಾದ ಮಹಮಯ್ ಅಹಮದ್ ಎಂಬ ತರುಣ ವೈದ್ಯನು ಪರದಾಪದ್ಧತಿ ನಿರುದ್ಧ ಅಭಿಪ್ರಾಯವುಳ್ಳವನಾಗಿದ್ದು ಸ್ತ್ರೀವಿದ್ಯಾಭ್ಯಾ ವ್ಯೋತ್ತಾಹಿಸುತ್ತಿದ್ದನೆಂದು ಷರೀಯತ್ ಇಸ್ಲಾಂ ಸಂಸ್ಥೆಯ ಅನುಚರರು ಕಲ್ಲಿನಿಂದ ಹೊಡೆದು ಸಾಯಿಸಿದರೆಂದು ಪ್ರಕಟವಾಗಿದೆ.

ನೋಟು ನುಂಗಿದ ಕಳ್ಳ

ಕೊಲ್ಹಾಪುರ ರೈಲ್ವೇ ಸ್ಟೇಷನ್ನಿನಲ್ಲೊಬ್ಬ ಪ್ರವಾಸಿಯು ಟಿಕೀಟು ತೆಗೆದುಕೊಳ್ಳುತ್ತಿರುವಾಗ ಅವನ ಜೇಬನ್ನು ಕತ್ತರಿಸಿ 100 ರೂ. ನೋಟನ್ನು ಪಾರಾಸಿದ ಕಳ್ಳನು ಅಲ್ಲಿಂದ ಪಾರಾಗುವಷ್ಟರಲ್ಲಿ ಜೊಬ್ಬಾಟವಾತಿ, ಜನರು ಗುಂಪು ಸೇರಿ ಅವನನ್ನು ಹಿಡಿದರು. ಆದರೆ ಹುಡುಕಿದಾಗಿ ಅವದ ಹತ್ತಿರ ನೋಟು ಸಿಗಲೇ ಇಲ್ಲ. ಅಷ್ಟರಲ್ಲಿ ಪೋಲೀಸರು ಬಂದು ಅವನನ್ನು ಆಸ್ಪತ್ರೆಗೆ ಸಾಗಿಸಿ, ವಾಂತಿಗೆ ಔಷಧಿಕುಡಿಸಿದರು. ಕೂಡಲೇ ವಾಂತಿಯಾದಾಗ, 100 ರೂ. ನೋಟು ಹೊರಬಿದ್ದು ಎಲ್ಲರಿಗೂ ಆಶ್ಚರ್ಯ ಉಂಟುಮಾಡಿತು.

45 ಮಕ್ಕಳ ತಂದೆಯಾದ ಮಗ

ಡೆನ್ಮಾರ್ಕಿನಲ್ಲೊಂದು ಶಿಬಿರದಲ್ಲಿ ಕೇವಲ ಹೆಂಗಸರು ಚಿಕ್ಕ ಮಕ್ಕಳು, ಮುದುಕರೇ ಇಡಲ್ಪಟ್ಟಿದ್ದರು. ಅವರಲ್ಲೊಬ್ಬ 17 ವರ್ಷದ ಜರ್ಮನ್ ಹುಡುಗನು ಇಂದು 45 ಮಕ್ಕಳ ತಂದೆಯಾಗಿದ್ದಾನೆಂದು ವಂದಿಯಾಗಿದೆ.

ಸ ತ್ಯ ವಾ ದಿ
ದಿನ ಪತ್ರಿಕೆ. ತಿಂಗಳಿಗೆ ಆರಾಣೆ



ಹರ್ಟಫರ್ಡ್‌ಷೈರಿನ ರಸ್ತೆಪಕ್ಕದ ಹಳ್ಳಕೊಳ್ಳದಲ್ಲಿ ಬೆಳೆ ಮಾಡಲಾಗುತ್ತಿದೆ

ಹೊಸ ಬೆಳೆಯು, ಆರಿಸಿ ತೆಗೆದ, ಪರಿಶುದ್ಧವಾದ

ಶ್ರೀ 'ಓಂ' ಗುರುತಿನ ಕೇಸರಿ

ಈ ಓಂ ಗುರುತಿನ ಕೇಸರಿ ಅತಿ ಪರಿಶುದ್ಧವಾದುದಕ್ಕೆ ಗ್ಯಾರಂಟಿಯಾದದು. ಸ್ಪೇನಿನ ಕೇಸರಿ ಗಿಡಗಳಲ್ಲಿಯ ಹೂಗಳಿಂದ ಆರಿಸಿ ತೆಗೆದುದಾಗಿದ. ನಮ್ಮಿಂದ ಸ್ಪೆಷಲ್ಲಾಗಿ ಅಮದು ಮಾಡಲ್ಪಟ್ಟಿರತಕ್ಕದ್ದು. ಬಹು ಹೊಳಪಿನಿಂದಲೂ ಸುವಾಸನೆಯಿಂದಲೂ ಕೂಡಿದುದಾಗಿದೆ. ಏನೊಂದೂ ಆಕ್ಷೇಪಣೀಯ ಪದಾರ್ಥಗಳೂ ಸೇರಿಲ್ಲ. ಮತ್ತು ಧಾರ್ಮಿಕವಾಗಿ ಪರಿಶುದ್ಧವಾಗಿದೆ. ದೇವಸ್ಥಾನಗಳಲ್ಲಿಯೂ, ದೇವರ ಪೂಜೆಗೂ, ಔಷಧಗಳಿಗೂ, ಮತ್ತು ತಿಂಡಿಪದಾರ್ಥಗಳಿಗೂ ಉಪಯೋಗಿಸಲ್ಪಡಲು ಅರ್ಹವಾಗಿದೆಯೆಂದು ಶಿಫಾರಸ್ಸುಮಾಡಲಾಗಿದೆ. 1 ತೋಲಾ, 5 ತೋಲಾ, ಡಬ್ಬಗಳಲ್ಲಿಯೂ, ಚಿಲ್ಲರೆಯಾಗಿಯೂ ದೊರೆಯುತ್ತದೆ. ಉಪಯೋಗಿಸಬೇಕಾಗಿ ವಿನಂತಿ

ವಲ್ಲಭದಾಸ್ ತೇಜ್‌ಪಾಲ್
೧೪ ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು

At Opera

From 24-9-48

Song of Bernadette

—featursng —

Jennifer Jones
William Eythe
Charles Biokford

Daily 3 Shows

Morning Shows From 24-9-48

King of Texas Rangers

Save the Cow

ಗೋ ವಧೆ ನಿಲ್ಲಲಿ

ಶಕ್ತಿಸುಧಾ

— ಫಸ್ಟ್ ಕ್ಲಾಸ್ ಟಾನಿಕ್ —

Edited, Printed and Published by M S Krishna Rao at the Satyavadi Press, Chamara Agrahar, Mysore